ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 4/2021

(ಫ್ರಾಸಾ-6 ಚಾಸಾ-6)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 15.07.2025

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜಣ್ಣ |
| ತಂದೆಯ ಹೆಸರು | - | ಮುನಿವೆಂಕಟಸ್ವಾಮಿ |
| ವಯಸ್ಸು | - | 50 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಗಂಗವಾರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2015 ರಿಂದ 2020 ರವರೆಗೆ ನಾನು ಗಂಗವಾರ ಗ್ರಾಮಪಂಚಾಯ್ತಿಯ ಸದಸ್ಯನಾಗಿದ್ದೆನು. ಚಾಸಾ-1 ಗೊತ್ತು. ಅವರು ಬೋವಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರು. ಊರಿನಲ್ಲಿ ಸಾಮಾನ್ಯವಾಗಿ ಯಾವುದಾದರೂ ಜಗಳವಾದರೆ ನಾವು ಕರೆಸಿ ರಾಜಿ ಪಂಚಾಯ್ತಿ ಮಾಡಿಸುತ್ತೇವೆ. 2020 ರಲ್ಲಿ ಚಾಸಾ-1 ರವರು ಆರೋಪಿ ತನ್ನೊಂದಿಗೆ ಜಗಳ ಮಾಡಿದ ವಿಚಾರ ನನಗೆ ತಿಳಿಸಿದ್ದು ನಾವು ರಾಜಿ ಪಂಚಾಯ್ತಿಗೆ ಕರೆದಿದ್ದು ಚಾಸಾ-1 ಮತ್ತು ಆರೋಪಿ ರಾಜಿ ಪಂಚಾಯ್ತಿಗೆ ಬರಲಿಲ್ಲ. ಚಾಸಾ-1 ಈ ಬಗ್ಗೆ ದೂರು ನೀಡಿದ ವಿಚಾರ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿಡಿಬಿ ವಕೀಲರಿಂದಃ**

2. ನಾನು ಜೆಡಿಎಸ್ ಪಕ್ಷದ ಬೆಂಬಲಿಗನಾಗಿದ್ದು ಗ್ರಾಮಪಂಚಾಯ್ತಿಯ ಸದಸ್ಯನಾಗಿದ್ದೆನು. ಆರೋಪಿ ಬಿಜೆಪಿ ಪಕ್ಷದ ಬೆಂಬಲಿತರು. ಈ ಹಿಂದೆ ನನ್ನ ತಂದೆಯ ಜೀವಿತಾವಧಿಯಲ್ಲಿ ಚಾಸಾ-1 ರಿಂದ 3 ಇವರು ನಮ್ಮ ಹೊಲಕ್ಕೆ ಕೂಲಿ ಕೆಲಸಕ್ಕೆ ಬರುತ್ತಿದ್ದರು. ಚಾಸಾ-1 ರಿಂದ 3 ಇವರಿಗೆ ಸರ್ಕಾರದಿಂದ ಪರಿಹಾರ ಮೊತ್ತ ಬಂದದ್ದು ಗೊತ್ತಾ ಎಂದು ಕೇಳಿಕ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ಬಳಿಗೆ ಬಂದಿದ್ದರು, ನಾನು ಅವರಿಗೆ ತಾಲ್ಲೂಕು ಕಛೇರಿಗೆ

ಪರಿಹಾರಕ್ಕಾಗಿ ಹೋಗಬೇಕು ಎಂದು ಹೇಳಿದ್ದೆನು. ಚಾಸಾ-1 ರಿಂದ 3 ರವರು ಈಗಲೂ ಸಹ ನಮ್ಮ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 3 ಇವರಿಗೆ ಪರಿಹಾರ ಕೊಡಿಸುವುದಕ್ಕಾಗಿ ಸರ್ಕಾರಿ ಇಲಾಖೆಗಳಿಗೆ ನಾನೇ ಓಡಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು